ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಮಖಂಡಿ

**ಸಿ.ಸಿ.ನಂ: 537/2016**

1- The United Finance Corporation
R/o : Jamkhandi,

...ಫಿರ್ಯಾದಿ.

ವಿರುದ್ಧ

ಆರೋಪಿಯ ಹೆಸರುಃ ವಿಜಯಕುಮಾರ ಅಪ್ಪಾಜಿ ಬಳಮಟ್ಟಿ ವಃ 45
ವಾಸಸ್ಥಳ: ಸಾಃ ತಾಃ ಜಮಖಂಡಿ. - - - - ಆರೋಪಿ

ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿ ಆಪಾದನೆ

ಆರೋಪಿತನಾದ ನೀನು ಫಿರ್ಯಾದಿಯ ಪೈನಾನ್ಸನಲ್ಲಿ ತನ್ನ ಅಡಚಣಿ ಸಲುವಾಗಿ ಕೈಗಡ ಸಾಲ ಅಂತಾ ರೂಃ 5,00,000/−ಗಳನ್ನು ಸಾಲವಾಗಿ ತೆಗೆದುಕೊಂಡಿದ್ದು ನಂತರ ಸದರಿ ಹಣವನ್ನು ನೀನು ಪಿರ್ಯಾದಿ ಬ್ಯಾಂಕಿಗೆ ಸಾಲವನ್ನು ಮರುಪಾವತಿಸುವದಾಗಿ ಒಪ್ಪಿಕೊಂಡಿದ್ದು ಆದರೆ ನೀನು ಒಪ್ಪಿ ಕೊಂಡಂತೆ ಹಣವನ್ನು ಹಿಂತಿರುಗಿಸಿರುವುದಿಲ್ಲ. ಆಗ ಪಿರ್ಯಾದಿಯು ಹಣ ವಾಪಸ್ ಕೊಡಲು ಕೇಳಿಕೊಂಡಾಗ ಆರೋಪಿತನಾದ ನೀನು ಮರುಪಾವತಿಗೆಂದು Bank of India Br−Jamkhandi ಒಂದು ಚೆಕ್ ನೀಡಿದ್ದು ಅದರ ನಂಬರ್−003267 ನೇದ್ದನ್ನು ಕೊಟ್ಟಿರುತ್ತೀ. ಸದರಿ ಚೆಕ್ಕನ್ನು ಫಿರ್ಯಾದಿಯು ನಗದೀಕರಣಕ್ಕೆಂದು ಸದರ State Bank of Mysore Br: Jamkhandi ಬ್ಯಾಂಕಿಗೆ ಜಮಾ ಮಾಡಿದಾಗ, ನಿನ್ನ ಖಾತೆಯಲ್ಲಿ ಹಣ ಇಲ್ಲವೆಂದು ಬ್ಯಾಂಕಿನವರು ಹಿಂಬರಹವನ್ನು ನೀಡಿರುತ್ತಾರೆ. ಆಗ ಸದರಿ ಹಣವನ್ನು ಮರು ಪಾವತಿಸುವಂತೆ ನಿನಗೆ ವಕೀಲರ ಮುಖಾಂತರ ನೋಟಿಸ್ ಕಳುಹಿಸಿದ್ದರೂ ಸಹ ಆರೋಪಿತನಾದ ನೀನು ಸದರಿ ಚೆಕ್ಕಿನ ಹಣವನ್ನು ಇಲ್ಲಿಯವರೆಗೂ ನೀಡಿರುವುದಿಲ್ಲ. ಇದು ಈ ಮೂಲಕ ವರ್ಗಾವಣೆಯ ಲಿಖಿತಗಳ ಅಧಿನಿಯಮ ಇಂಡಿಯನ್ ನೇಗೋಶಿಯೇಬಲ್ ಇನ್ಸಟ್ರುಮೆಂಟ್ ಆಕ್ಟ ಕಲಂ−138 & 142 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆಃ 1) ಮೇಲೆ ಓದಿ ಹೇಳಿದ ಆಪಾದನೆಯು ತಿಳಿಯಿತೋ ಹೇಗೆ ?

ಉತ್ತರಃ ತಿಳಿಯಿತು

ಪ್ರಶ್ನೆಃ 2) ಸದರಿ ಆರೋಪಿಯ ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಆಗಬೇಕೋ ?

ಉತ್ತರಃ ವಿಚಾರಣೆಯಾಗಬೇಕು

(ಸದರಿ ಆರೋಪಿಯ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಅವನಿಗೆ ತಿಳಿಯುವ ಭಾಷ್ಷೆಯಲ್ಲಿ ಓದಿ ಹೇಳಿ ತಿಳಿಸಿ ನಂತರ ಅವನ ಸಹಿಯನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ಓ. ಹೇ. ಕೇ. ಸರಿ. ಇದೆ.

ಸಹಿ/-

Pril. ಜೆ ಎಂ ಎಫ್ ಸಿ ಜಮಖಂಡಿ .

. ಆರೋಪಿಯ ಸಹಿ